## ಕನ್ನಡಕ ಹುಡುಕಬೇಡಿ



ಕಿಟ್ಟಪ್ಪ ಕನ್ನಡಕ ಹಾಕಿದಾಗ ಪಕ್ಕದ ಮನೆ ಕಡೆ ಕಿಟಕಿಯಲ್ಲಿ ನೋಟ ಹರಿಸುತ್ತಿದ್ದ. ಅಲ್ಲೇನಿದೆ ಎನ್ನುವುದು ಹೆಂಡತಿ ರಾಮಿಗೆ ಗೊತ್ತು. ಮೊನ್ನೆ ರಾಮಿ ಎರಡು ದಿನ ತವರಿಗೆ ಹೋಗಿ ಬರುತ್ತೇನೆ ಎಂದಾಗ ಕಿಟ್ಟಪ್ಪ ತಕರಾರಿಲ್ಲದೇ ಪರವಾನಗಿ ನೀಡಿದ. ಬಹಳ ಖುಷಿಯಿಂದ ಹೆಂಡತಿಯನ್ನು ಕಳುಹಿಸಿಕೊಟ್ಟ. ಇನ್ನೆರಡು ದಿನ ಯಾವುದೇ ಕಿರಿಕಿರಿಯಿಲ್ಲ, ಅಡೆತಡೆಯಿಲ್ಲ ಎಂದು ಕಿಟ್ಟಪ್ಪ ಪಕ್ಕದ ಮನೆ ಕಿಟಕಿಗೆ ಕುರ್ಚಿ ಹಾಕಿಕೊಂಡು ಕುಳಿತರಾಯಿತು ಎಂದುಕೊಂಡು ಕನ್ನಡಕಕ್ಕಾಗಿ ಹುಡುಕಾಡಿದ. ಕನ್ನಡಕ ಇರಬೇಕಾದ ಜಾಗದಲ್ಲಿ ಚೀಟಿಯಿತ್ತು. ಅದರಲ್ಲಿ, 'ರೀ... ಕನ್ನಡಕ ಹುಡುಕಬೇಡಿ' ಎಂದು ಬರೆದಿತ್ತು.

**ಎಚ್. ಜನಾರ್ದನ ಹಂದೆ**



## ಹಾರಲು ಬರುತ್ತಾ?

ಕಿಟ್ಟಿ ಪ್ರಖ್ಯಾತ ಹಡಗು ಕಂಪನಿಯಲ್ಲಿ ಕ್ಯಾಪ್ಟನ್ ಆಗಿ ಕೆಲಸಕ್ಕೆ ಸೇರಿದ್ದ. ಕೆಲಸಕ್ಕೆ ಅಗತ್ಯವಿದ್ದ ಕೆಲವು ಕೌಶಲಗಳು ಕಿಟ್ಟಿಗೆ ಇರಲಿಲ್ಲ. ಅದನ್ನು ಅರಿತ ಅಲ್ಲಿನ ಒಬ್ಬ ಚುರುಕು ಹುಡುಗ ಗುಂಡನ ಬಳಿ ಬಂದು, 'ಸಾರ್, ನೀವು ಗ್ರೂಪ್ ಕ್ಯಾಪ್ಟನ್ ಆಗಿದ್ದೀರಾ, ಆದರೆ ನಿಮಗೆ ಈಜಲು ಬರಲ್ವಂತೆ' ಎಂದು ಕೆಣಕಿದ. ಅವನ ಮಾತಿಗೆ ಸಿಟ್ಟಾದ ಕಿಟ್ಟಿ, 'ಹೌದಪ್ಪ, ನನಗೆ ಈಜಲು ಬರಲ್ಲ, ಆದರೆ ಎಲ್ಲಾ ಪೈಲಟ್‌ಗಳಿಗೆ ಹಾರಲು ಬರುತ್ತೇನು?' ಎಂದು ಕೇಳಿದಾಗ ಹುಡುಗ ನಿರುತ್ತರನಾದ.

**ವಿ. ವಿಜಯೇಂದ್ರ ರಾವ್**